### ಶೇ.50 ಮೀಸಲಿನಂತೆ ನೇಮಕ | ಉದ್ಯೋಗಾಕಾಂಕ್ಷಿಗಳಿಗೆ ಸಿಎಂ ಸಿಹಿ

# ತಿಂಗಳಲ್ಲಿ 53,000 ಹುದ್ದೆ ಭರ್ತಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸಲಾಗಿದ್ದ ಮೀಸಲಾತಿ ಪ್ರಮಾಣ ಕೈಬಿಟ್ಟು, ಒಟ್ಟು ಶೇ.50ರ ಮೀಸಲು ಮಿತಿಯಲ್ಲಿಯೇ ಮುಂದಿನ 30 ದಿನದಲ್ಲಿ 53 ಸಾವಿರ ನೇರ ನೇಮಕಾತಿ ಹುದ್ದೆ ಭರ್ತಿ ಮಾಡುವ ಪ್ರಕ್ರಿಯೆ ಆರಂಭಿಸುವ ಐತಿಹಾಸಿಕ ತೀರ್ಮಾನವನ್ನು ರಾಜ್ಯ ಸಚಿವಸಂಪುಟ ಕೈಗೊಂಡಿದೆ. ಮೀಸಲಾತಿ ಹೆಚ್ಚಳದ ವಿಚಾರವಾಗಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಹಿನ್ನೆಲೆಯಲ್ಲಿ, ನೇಮಕ ಪ್ರಕ್ರಿಯೆ ಸ್ಥಗಿತಗೊಳ್ಳಬಾರದೆಂಬ ಕಾರಣಕ್ಕೆ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಶೇ.56ರ ಮೀಸಲು ಮಿತಿಗೆ ನ್ಯಾಯಾಲಯ ತಡೆ ನೀಡಿರುವುದರಿಂದ ಸುಮಾರು 50 ಸಾವಿರಕ್ಕಿಂತ ಹೆಚ್ಚಿನ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಈ ಉದ್ದೇಶದಿಂದ 2022ಕ್ಕಿಂತ ಹಿಂದೆ ಇದ್ದ ಮೀಸಲು ಪ್ರಮಾಣದಂತೆಯೇ ಮುಂದುವರಿಯುವುದು, ಕೋರ್ಟ್ ಆದೇಶ ಬಂದ ನಂತರ ಹೆಚ್ಚಳ ಪರಿಗಣಿಸಲು ತೀರ್ಮಾನಿಸಲಾಯಿತು ಎಂದರು.

■ **ಕೋರ್ಟ್ ತೀರ್ಪಿನ ಬಳಿಕ ಮೀಸಲು ಹೆಚ್ಚಳ ತೀರ್ಮಾನ**

**ಆಡಳಿತ ಯಂತ್ರಕ್ಕೆ ಹೊಸ ಚೈತನ್ಯ:** ಸಂಪುಟ ಸಭೆಯ ಈ ತೀರ್ಮಾನ ರಾಜ್ಯದ ಆಡಳಿತ ಯಂತ್ರಕ್ಕೆ ಹೊಸ ಚೈತನ್ಯ ನೀಡುವ ನಿರೀಕ್ಷೆಯಿದೆ. ಕಳೆದ 2 ವರ್ಷಗಳಿಂದ ಮೀಸಲಾತಿ ಗೊಂದಲ ಮತ್ತು ಕಾನೂನು ಹೋರಾಟಗಳಿಂದಾಗಿ ವಿವಿಧ ಇಲಾಖೆಗಳಲ್ಲಿ ನೇಮಕಾತಿ ಹಳ್ಳ ಹಿಡಿದಿತ್ತು. ಇದರಿಂದಾಗಿ ಸರ್ಕಾರಿ ಕಚೇರಿಗಳಲ್ಲಿ ಸಿಬ್ಬಂದಿ ಕೊರತೆ ಎದುರಾಗಿ ಸಾರ್ವಜನಿಕ ಸೇವೆಗಳ ಮೇಲೆ ಪರಿಣಾಮ ಬೀರಿತ್ತು. ಇನ್ನೊಂದೆಡೆ ಹೋರಾಟವೂ ತೀವ್ರಗೊಂಡಿತ್ತು. ಈಗ 30 ದಿನಗಳ ಕಾಲಮಿತಿಯೊಳಗೆ ಅಧಿಸೂಚನೆ ಹೊರಡಿಸಲು ಸೂಚಿಸಿರುವುದರಿಂದ, ಕೆಪಿಎಸ್‌ಸಿ ಸೇರಿದಂತೆ ವಿವಿಧ ನೇಮಕಾತಿ ಪ್ರಾಧಿಕಾರಗಳು ಸಮರೋಪಾದಿಯಲ್ಲಿ ಸಿದ್ಧತೆ ನಡೆಸಬೇಕಿದೆ. ಇನ್ನೊಂದೆಡೆ, ಮೀಸಲಾತಿ ಹೆಚ್ಚಳದ ನಿರೀಕ್ಷೆಯಲ್ಲಿದ್ದ ಸಮುದಾಯಗಳಿಗೆ ಈ ನಿರ್ಧಾರ ಅಲ್ಪಮಟ್ಟಿನ ನಿರಾಸೆ ತಂದಿದ್ದರೂ, ಉದ್ಯೋಗಾವಕಾಶದ ದೃಷ್ಟಿಯಿಂದ ಇದು ಅನಿವಾರ್ಯ ಎಂಬ ತರ್ಕ ಕೇಳಿಬರುತ್ತಿದೆ. ▶ ಪುಟ 2



## ಹೀಗಿರಲಿದೆ ಪ್ರಕ್ರಿಯೆ

- ■ ಶೇ.15 ಎಸ್ಸಿ , ಶೇ.3 ಎಸ್ಟಿ ಮೀಸಲು ಅನ್ವಯ ತಕ್ಷಣಕ್ಕೆ ಇಲಾಖೆಗಳ ನೇಮಕ ಅಧಿಸೂಚನೆ ಪ್ರಕಟ
- ■ ಜನ ಸಂಖ್ಯೆಗೆ ಅನುಗುಣವಾಗಿ ಎಸ್ಸಿ ಮೀಸಲು ಶೇ.17 ಮತ್ತು ಎಸ್ಟಿ ಮೀಸಲು ಶೇ.7ಕ್ಕೆ ಹೆಚ್ಚಳವಾಗಿತ್ತು, ತಾತ್ಕಾಲಿಕವಾಗಿ ಅದರ ಪರಿಗಣನೆ ಇಲ್ಲ
- ■ ಶೇ.15 ಎಸ್ಸಿ ಮೀಸಲಿಗೆ ಒಳ ಮೀಸಲು ಹಂಚಿಕೆ ಮಾಡಲಾಗುತ್ತದೆ. ಅಧಿಸೂಚನೆಯಲ್ಲಿ ಅದರ ಬಗ್ಗೆ ಸ್ಪಷ್ಟತೆ ಸಿಗಲಿದೆ
- ■ ಶೇ.6 ಹುದ್ದೆ ಎಸ್ಸಿ, ಎಸ್ಟಿಗೆ ಮೀಸಲು, ಕೋರ್ಟ್ ತೀರ್ಪಿನ ಬಳಿಕವಷ್ಟೇ ಭರ್ತಿ
- ■ ಸರ್ಕಾರದ ಈ ಕ್ರಮದಿಂದ ನ್ಯಾಯಾಲಯದ ಲಕ್ಷ್ಮಣ ರೇಖೆ ದಾಟಿದಂತಾಗಲ್ಲ, ನೇಮಕ ಪ್ರಕ್ರಿಯೆ ಆರಂಭಕ್ಕೆ ತೊಡಕಿಲ್ಲ

**56,432**

ಹಣಕಾಸು ಇಲಾಖೆಯಿಂದ ನೇಮಕಕ್ಕೆ ಒಪ್ಪಿಗೆ ಸಿಕ್ಕ ಒಟ್ಟು ಹುದ್ದೆಗಳ ಸಂಖ್ಯೆ

**32,132**

ಕಲ್ಯಾಣ ಕರ್ನಾಟಕದ ವೃಂದದಡಿ ಖಾಲಿ ಇರುವ ಗಳ ಪೈಕಿ ಶೇ.80 ಹುದ್ದೆಗಳು

**24,300**

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಎದುರಾಗಿ ಭರ್ತಿಗೆ ಅವಕಾಶ

## ಸಂಪುಟದಲ್ಲಿ ಅಪಸ್ವರ

ಮೀಸಲು ಪ್ರಮಾಣವನ್ನು ಶೇ.17ರಿಂದ 15ಕ್ಕೆ ಇಳಿಸುವ ವಿಚಾರ ಒಂದು ವರ್ಗದ ಸಚಿವರ ಅಸಮಾಧಾನಕ್ಕೂ ಕಾರಣವಾಯಿತು. ಸಂಪುಟ ಸಭೆಯಲ್ಲೂ ಅದರ ಕಾವು ಕಾಣಿಸಿತು. ಶೇ.15ನ್ನು ಹೇಗೆ ಹಂಚಿಕೆ ಮಾಡುತ್ತೀರಿ? ಈಗಲೇ ಸ್ಪಷ್ಟ ಮಾಡಿ ಎಂದು ಕೆಲವು ಸಚಿವರು ಪಟ್ಟು ಹಿಡಿದಿದ್ದರೆನ್ನಲಾಗಿದೆ.

## ರಾಜ್ಯಪಾಲರ ಅಂಕಿತ, ಒಳ ಮೀಸಲಾತಿ ಈಗ ಅಧಿಕೃತ

**ಬೆಂಗಳೂರು:** ರಾಜ್ಯದ ಹದಿನಾರನೇ ವಿಧಾನಸಭೆಯ ಎಂಟನೇ ಅಧಿವೇಶನದಲ್ಲಿ ಅಂಗೀಕಾರಗೊಂಡಿದ್ದ 'ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ವಿಧೇಯಕ-2025'ಕ್ಕೆ ರಾಜ್ಯಪಾಲರು ಗುರುವಾರ ಸಂಜೆ ಅಂಕಿತ ಹಾಕಿದ್ದಾರೆ.



■ **ಸದ್ಯ ರಾಜ್ಯದಲ್ಲಿ ಜಾರಿ ಆಗುವುದಿಲ್ಲ**

ರಾಜ್ಯದಲ್ಲಿ ಒಟ್ಟು 101 ಅನುಸೂಚಿತ ಜಾತಿಗಳಿದ್ದು, ಇವುಗಳಿಗೆ ಪ್ರಸ್ತುತ ಶೇ.17 ಮೀಸಲಾತಿ ಕಲ್ಪಿಸಲಾಗಿದೆ. ಸಂವಿಧಾನದ ಅನುಚ್ಛೇದ 46ರ ಅಡಿ ಸಾಮಾಜಿಕ ನ್ಯಾಯ ಒದಗಿಸುವ ಬದ್ಧತೆಯೊಂದಿಗೆ, ಎಲ್ಲ ಉಪ-ಜಾತಿಗಳಿಗೂ ಮೀಸಲಾತಿ ಪ್ರಯೋಜನಗಳು ನ್ಯಾಯಯುತವಾಗಿ ತಲುಪುವಂತೆ ಮಾಡಲು ಈ ಉಪ-ವರ್ಗೀಕರಣ ಜಾರಿಗೆ ತರಲಾಗಿದೆ.

ಈ ವರ್ಗೀಕರಣ ಮಾಡುವ ಮುನ್ನ ಸರ್ಕಾರವು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದಲ್ಲಿ ಏಕವ್ಯಕ್ತಿ ಆಯೋಗ ರಚಿಸಿತ್ತು. ಆಯೋಗವು 2025ರ ಆಗಸ್ಟ್ 4ರಂದು ಸಲ್ಲಿಸಿದ ವರದಿಯಲ್ಲಿನ ಶಿಫಾರಸುಗಳನ್ನು ಆಧರಿಸಿ, ಜಾತಿಗಳನ್ನು ಅವುಗಳ ಹಿಂದುಳಿದಿರುವಿಕೆ ಮತ್ತು ಜನಸಂಖ್ಯೆಯ ಆಧಾರದ ಮೇಲೆ 3 ಪ್ರವರ್ಗಗಳಾಗಿ ವಿಂಗಡಿಸಲಾಗಿದೆ.

ಹೊಸ ಕಾಯ್ದೆಯನ್ವಯ, ಒಟ್ಟು ಶೇ. 17 ಮೀಸಲಾತಿಯಲ್ಲಿ ಪ್ರವರ್ಗ- ಎ ಅಡಿ ಬರುವ 16 ಜಾತಿಗಳಿಗೆ ಶೇ. 6, ಪ್ರವರ್ಗ- ಬಿ ಅಡಿ ಬರುವ 19 ಜಾತಿಗಳಿಗೆ ಶೇ. 6 ಮತ್ತು ಪ್ರವರ್ಗ- ಸಿ ಅಡಿ ಬರುವ 63 ಜಾತಿಗಳಿಗೆ ಶೇ. 5ರಷ್ಟು ಮೀಸಲಾತಿಯನ್ನು ಹಂಚಿಕೆ ಮಾಡಲಾಗಿದೆ. ಇದರಿಂದಾಗಿ ವಿವಿಧ ಸಮುದಾಯಗಳ ನಡುವಿನ ಅಸಮಾನತೆ ತೊಲಗಲಿದೆ ಎಂದು ನಿರೀಕ್ಷಿಸಲಾಗಿದೆ. ▶ ಪುಟ 2

# 24,300 ಹುದ್ದೆ ಆರಂಭಿಕ ಭರ್ತಿ

## ಮಾರ್ಚ್ 2ನೇ ವಾರ ಚಾಲನೆ ಸಾಧ್ಯತೆ | ಕೆಪಿಎಸ್ಸಿ, ಕೆಇಎ ಮೂಲಕ ಪ್ರಕ್ರಿಯೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಒಟ್ಟು ಶೇ.50 ಮೀಸಲಾತಿ ಮಿತಿಯಲ್ಲೇ 53 ಸಾವಿರ ನೇರ ನೇಮಕಾತಿ ಹುದ್ದೆ ಭರ್ತಿಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡ ಬೆನ್ನಲ್ಲೇ ಮೊದಲ ಹಂತದಲ್ಲಿ 24,300 ಹುದ್ದೆ ತುಂಬಲು ಸರ್ಕಾರ ಹೆಜ್ಜೆ ಇಟ್ಟಿದೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಖಾಲಿ ಹುದ್ದೆ ಭರ್ತಿಗೆ ಆರ್ಥಿಕ ಇಲಾಖೆ ನೀಡಿರುವ ಅನುಮೋದನೆಗೆ ಸಂಬಂಧಿಸಿದಂತೆ ಮಾರ್ಚ್ 2ನೇ ವಾರ ಪ್ರಕ್ರಿಯೆ ಆರಂಭವಾಗುವ ಸಾಧ್ಯತೆ ಇದೆ.

■ ಸಾರಿಗೆ ಇಲಾಖೆಯಲ್ಲಿ ಅತ್ಯಧಿಕ 6,847 ನೇಮಕಾತಿ

ವಿವಿಧ ಹಂತದ ಹುದ್ದೆಗಳಿಗೆ ಪ್ರತ್ಯೇಕವಾಗಿ ಅಥವಾ ಸಮೂಹವಾಗಿ ಅಧಿಸೂಚನೆ ಪ್ರಕಟಿಸಲು ಅವಕಾಶ ಇದೆ. ಸಿಬ್ಬಂದಿ ಕೊರತೆಯಿಂದ ಬಳಲುತ್ತಿರುವ ಇಲಾಖೆಗಳು ತಡ ಮಾಡದೆ ಮುಂದುವರಿಯುವ ಸಾಧ್ಯತೆ ಹೆಚ್ಚಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಪ್ರವೇಶ ಪರೀಕ್ಷೆ ನಡೆಸಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಸರ್ಕಾರ ಶೇ.50 ಮೀಸಲಾತಿ ಮೀರದಂತೆ ಆದೇಶ ಹೊರಡಿಸಿ ನಿರ್ದೇಶನ ನೀಡಲಿದ್ದು ಬಳಿಕ ಇಲಾಖೆಗಳು ಪರೀಕ್ಷಾ ಘಟಕಗಳಿಗೆ ಅಧಿಸೂಚನೆ ಹೊರಡಿಸಲು ಕೋರಲಿವೆ. ನಂತರ ಅರ್ಜಿ ಆಹ್ವಾನ ಪ್ರಕ್ರಿಯೆ ನಡೆಯುವುದು. ಈ ಬಾರಿಯ ನೇಮಕಾತಿ ಪಟ್ಟಿಯಲ್ಲಿ ಸಾರಿಗೆ ಇಲಾಖೆಯು ಹೆಚ್ಚಿನ ಹುದ್ದೆಗಳ ಭರ್ತಿಗೆ ಮುಂದಾಗಿರುವುದು ವಿಶೇಷವಾಗಿದೆ. ಒಟ್ಟು 6,847 ಹುದ್ದೆಗಳ ಭರ್ತಿಗೆ ಇಲ್ಲಿ ಅವಕಾಶ ನೀಡಲಾಗಿದ್ದು, ಇದರಲ್ಲಿ ಸಿ-ದರ್ಜೆಯ ಹುದ್ದೆಗಳು ಸಿಂಹಪಾಲು ಹೊಂದಿವೆ. ● ಪುಟ 2



### ನೇಮಕಾತಿ ಸದ್ದು ಮೀಸಲಾತಿ ಜಿದ್ದು

ಬೆಂಗಳೂರು: ಖಾಲಿ ಹುದ್ದೆಗಳ ನೇಮಕಾತಿಗೆ ಸರ್ಕಾರ ಮುಂದಾಗಿರುವುದು ನಿರುದ್ಯೋಗಿ ಯುವಜನತೆಗೆ ಸಂತಸ ಮೂಡಿಸಿರುವ ಹೊತ್ತಲ್ಲೇ



'ಸಮುದಾಯದ ಕೋಪ' ಮತ್ತು 'ಒಳ ಮೀಸಲು ಪಾಲಿಸಬೇಕೆಂಬ ಹಠ' ಸರ್ಕಾರಕ್ಕೆ ಸಂಕಷ್ಟ ತಂದೊಡ್ಡಿದೆ. ಯಾವುದೇ ಸಮುದಾಯ ಸರ್ಕಾರದ ತೀರ್ಮಾನದ ವಿರುದ್ಧ ಬಹಿರಂಗ ಕೋಪತಾಪ ಪ್ರದರ್ಶಿಸಬಾರದೆಂಬ ಕಾರಣಕ್ಕೆ ಖುದ್ದು ಸಚಿವರುಗಳೇ ಅಖಾಡಕ್ಕಿಳಿದು ಮನವೊಲಿಕೆ ಕಸರತ್ತು ಆರಂಭಿಸಿದ್ದಾರೆ. ಈ ನಡುವೆ ಸಮುದಾಯವಾರು ಪ್ರಮುಖರ ಸಭೆ ಕೂಡ ನಡೆದಿದ್ದು, ಅಭಿಪ್ರಾಯಗಳು ಇನ್ನೆರೆಡು ದಿನಗಳಲ್ಲಿ ಹೊರ ಬೀಳಲಿದೆ. ● ವಿವರ ಪುಟ 7

### ಕಲ್ಯಾಣದಲ್ಲಿ ಶೇ.80 ನೇಮಕ



371 ಜೆ ಕಲ್ಯಾಣ ಕರ್ನಾಟಕದ ವೃಂದದಡಿ ಖಾಲಿ ಇರುವ 32,132 ಹುದ್ದೆಗಳ ಪೈಕಿ ಶೆ.80 ಹುದ್ದೆ ನೇಮಕ ಮಾಡಲು ಆರ್ಥಿಕ ಇಲಾಖೆಯಿಂದ ಪರಿಭಾವಿತ ಸಹಮತಿ ಇದೆ. ಅಂದರೆ ಇಲಾಖೆಗಳು ಅಧಿಸೂಚನೆ ಹೊರಡಿಸಿ ನಂತರ ಅನುಮತಿ ಪಡೆದುಕೊಳ್ಳಬಹುದಾಗಿದೆ.

### ಒತ್ತಡ ಹೇರಲು ಅಭಿಯಾನ

ನೇಮಕ ಪ್ರಕ್ರಿಯೆ ಆರಂಭಿಸಲು ಸರ್ಕಾರ ಹಸಿರು ನಿಶಾನೆ ತೋರಿವೆ, ಆದರೆ ಇಲಾಖೆಗಳು ನಿಧಾನಗತಿ ಧೋರಣೆ ತಾಳಬಾರದು ಎಂಬ ಕಾರಣಕ್ಕೆ ಉದ್ಯೋಗಾಕಾಂಕ್ಷಿಗಳು ಅಭಿಯಾನ ನಡೆಸಲು ಉದ್ದೇಶಿಸಿದ್ದಾರೆ. ಅಂದರೆ ಹಣಕಾಸು ಇಲಾಖೆಯಿಂದ ಅನುಮತಿ ಪಡೆದುಕೊಂಡಿರುವ ಇಲಾಖೆಗಳ ಪ್ರಧಾನ ಕಾರ್ಯದರ್ಶಿಯನ್ನು ಉದ್ಯೋಗಾಕಾಂಕ್ಷಿಗಳ ತಂಡ ಖುದ್ದು ಭೇಟಿ ಮಾಡಿ ಮನವಿ ಮಾಡಲು ನಿರ್ಧರಿಸಿದೆ.

ಭರ್ತಿ ಮಂಜೂರಾತಿ ಹುದ್ದೆಗಳ ಮಾಹಿತಿ ▼ 2

# 24,300 ಹುದ್ದೆ ಆರಂಭಿಕ ಭರ್ತಿ

ಮೊದಲನೇ ಪುಟದಿಂದ...

ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯು 5,267 ಹುದ್ದೆಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಒಟ್ಟಾರೆಯಾಗಿ 32 ವಿವಿಧ ಇಲಾಖೆಗಳಲ್ಲಿ ಎ, ಬಿ ಮತ್ತು ಸಿ ದರ್ಜೆಯ ಒಟ್ಟು 24,300 ಹುದ್ದೆ ಭರ್ತಿ ಮಾಡಲು ಈ ಅನುಬಂಧದಲ್ಲಿ ತಿಳಿಸಲಾಗಿದೆ. ಇದರಲ್ಲಿ 23,119 ಹುದ್ದೆಗಳು 'ಸಿ' ದರ್ಜೆಯದ್ದಾಗಿದ್ದು, ಇಂಧನ, ಕಂದಾಯ, ಮತ್ತು ಆರೋಗ್ಯ ಇಲಾಖೆಗಳಲ್ಲೂ ಗಣನೀಯ ಸಂಖ್ಯೆಯ ಹುದ್ದೆಗಳು ಲಭ್ಯವಿದೆ.

## ಭರ್ತಿ ಮಂಜೂರಾತಿ ಹುದ್ದೆಗಳ ಮಾಹಿತಿ

| ಇಲಾಖೆ | ಎ | ಬಿ | ಸಿ | ಒಟ್ಟು |
|---|---|---|---|---|
| ಕೃಷಿ | 72 | 100 | 381 | 553 |
| ಪಶುಸಂಗೋಪನೆ | 22 | 0 | 9 | 31 |
| ಹಿಂದುಳಿದ ವರ್ಗ | 7 | 0 | 0 | 7 |
| ಸಹಕಾರ | 0 | 10 | 170 | 180 |
| ಸಿಆಸುಇ | 2 | 0 | 56 | 58 |
| ಪರಿಸರ | 0 | 53 | 39 | 92 |
| ಇಂಧನ | 0 | 0 | 2,400 | 2,400 |
| ಆರ್ಥಿಕ | 32 | 100 | 2,111 | 2,243 |
| ಆಹಾರ | 0 | 0 | 3 | 3 |
| ಕೈಮಗ್ಗ ಜವಳಿ | 0 | 12 | 0 | 12 |
| ಆರೋಗ್ಯ | 220 | 0 | 1,505 | 1,725 |
| ಉನ್ನತ ಶಿಕ್ಷಣ | 5 | 0 | 55 | 60 |
| ಒಳಾಡಳಿತ | 5 | 0 | 552 | 557 |
| ವಸತಿ | 0 | 2 | 36 | 38 |
| ಕನ್ನಡ ಸಂಸ್ಕೃತಿ | 0 | 6 | 0 | 6 |
| ಕಾರ್ಮಿಕ | 0 | 7 | 0 | 7 |
| ಕೈಗಾರಿಕೆ | 1 | 9 | 32 | 42 |
| ವೈದ್ಯಕೀಯ ಶಿಕ್ಷಣ | 147 | 5 | 181 | 333 |
| ಗಣಿ | 0 | 18 | 0 | 18 |
| ಸಣ್ಣ ನೀರಾವರಿ | 0 | 11 | 10 | 21 |
| ಅಲ್ಪಸಂಖ್ಯಾತರ ಕಲ್ಯಾಣ | 1 | 166 | 617 | 784 |
| ಕಂದಾಯ | 0 | 40 | 1,310 | 1,350 |
| ಗ್ರಾಮೀಣಾಭಿವೃದ್ಧಿ | 20 | 4 | 327 | 351 |
| ಪರಿಶಿಷ್ಟ ಜಾತಿ ಕಲ್ಯಾಣ | 10 | 7 | 875 | 892 |
| ಪರಿಶಿಷ್ಟ ಪಂಗಡ | 0 | 0 | 200 | 200 |
| ಶಿಕ್ಷಣ | 0 | 0 | 5,267 | 5,267 |
| ರೇಷ್ಮೆ | 2 | 4 | 9 | 15 |
| ಪ್ರವಾಸೋದ್ಯಮ | 0 | 0 | 5 | 5 |
| ಸಾರಿಗೆ | 0 | 27 | 6,820 | 6,847 |
| ನಗರಾಭಿವೃದ್ಧಿ | 16 | 28 | 141 | 185 |
| ಮಹಿಳಾ ಮಕ್ಕಳ ಅಭಿವೃದ್ಧಿ | 0 | 10 | 4 | 14 |
| ಯುವಜನ ಸೇವೆ | 0 | 0 | 4 | 4 |
| ಒಟ್ಟು | 562 | 619 | 23,119 | 24,300 |